ಜನರೋ... ಕೆ.ಎಸ್. ಅಶ್ವಥ್, ಈಶ್ವರಪ್ಪ, ವೀರಭದ್ರಪ್ಪ, ಶಾಂತಮ್ಮ ಇವರನ್ನೆಲ್ಲ ಸ್ಮರಿಸದೆ ಇರೋದು ಸಾಧ್ಯವೇ?

1960–61ರ ವರೆಗೆ ನಾಟಕ ಕಂಪನಿಗಳ ಜತೆ ನನ್ನ ಹಾಗೂ ಯಜಮಾನರ ಟೂರ್ ಸಾಗೇ ಇತ್ತು. ನಮಗೆ ಮದುವೆಯಾಗಿ ಒಂಬತ್ತು ವರ್ಷಗಳಾದರೂ ಮಕ್ಕಳಾಗಿರಲಿಲ್ಲ, ಅದೊಂದು ಬಾಧೆ ಕಾಡುತ್ತಲೇ ಇತ್ತು. 1962ರಲ್ಲಿ ನನ್ನ ಮೊದಲ ಮಗ (ಶಿವಣ್ಣ) ಹುಟ್ಟಿದ. ಅದೇನು ಅದೃಷ್ಟವೋ. ನಮ್ಮ ಭಾಗ್ಯದ ಬಾಗಿಲೇ ತೆರೆದ ಹಾಗಾಯಿತು. ಆಗ ಯಜಮಾನರು 'ಸಂತ ತುಕಾರಾಂ'ನಲ್ಲಿ ಅಭಿನಯಿಸುತ್ತಿದ್ದರು. ಅದಕ್ಕೆ ದೊರೆತಷ್ಟು ಸಂಭಾವನೆ ಹಿಂದೆಂದೂ ಅವರಿಗೆ ಸಿಕ್ಕಿರಲಿಲ್ಲ. ಮಗ ಹುಟ್ಟಿದ ಗಳಿಗೆ ಅಂತ ಇವರು ಕುಣಿದಾಡಿ ಬಿಟ್ಟರು. ಆಮೇಲೆ ಬಿಡಿ, ಯಜಮಾನರು ಸತತವಾಗಿ ನಾಯಕ ನಟನಾಗಿ ಮೆರೆದದ್ದು ಗೊತ್ತೇ ಇದೆ. ಕನ್ನಡದ ಜನ ಅವರ ಅಭಿನಯವನ್ನು ಹೃದಯ ತುಂಬಿ ಕೊಂಡಾಡಿದರು. ಅವರನ್ನು ಕೈಚಾಚಿ ಬರಮಾಡಿಕೊಂಡರು. ನಾವಿವತ್ತು ಅನ್ನ ತಿನ್ನುತ್ತಿರೋದು ಕನ್ನಡಿಗರ ಉದಾರ ಹೃದಯದ ದಯೆಯಿಂದ; ಅವರ ಒಲುಮೆಯೇ ನಮಗೆ ಶ್ರೀರಕ್ಷೆ, ವಜ್ರಕವಚ.

ಯಜಮಾನರಿಗೆ ಬೆಂಗಳೂರಿನಲ್ಲಿ ಡಿಸ್ಟ್ರಿಬ್ಯೂಷನ್ ಆಫೀಸ್ ತೆಗೀಬೇಕು ಅಂತ ಮೊದಲಿನಿಂದಲೂ ಒಂದು ಕನಸು. ಅವರ ಆಸೆಗೆ ಬೆಂಬಲ ಕೊಟ್ಟವರು ಚಿತ್ರದುರ್ಗದ ಕೆ.ಎಚ್. ನಾಗರಾಜ, ದ್ವಾರಕಾನಾಥ ಮೊದಲಾದವರು. ಅಷ್ಟು ಹೊತ್ತಿಗೆ ನಮಗೂ ಸಾಕಷ್ಟು ಸಂಪಾದನೆಯಿತ್ತು. ಶಿವರಾಜ ಕುಮಾರನ ನಂತರ ಮಗಳು ಲಕ್ಷ್ಮಿ ಹುಟ್ಟಿದಳು. ಆಮೇಲೆ ರಾಘವೇಂದ್ರ, ಪೂರ್ಣಿಮಾ, ಪುನೀತ. ನಮ್ಮ ಕಣ್ಮನಗಳನ್ನು ತುಂಬಿದ ಐವರು ಮಕ್ಕಳ ತುಂಬು ಸಂಸಾರ ನಮ್ಮದು. 1972ರಲ್ಲಿ ಬೆಂಗಳೂರಿನಲ್ಲಿ 'ವಜ್ರೇಶ್ವರಿ ಕಂಬೈನ್ಸ್' ಸಂಸ್ಥೆಯನ್ನು ಪ್ರಾರಂಭಿಸಿದೆವು. ನಮ್ಮ ಸಂಸ್ಥೆ ಜಯಭೇರಿ ಬಾರಿಸುತ್ತಲೇ ಹೋಯಿತು. ನಾನು ಆಗಲೇ ಹೇಳಿದೆನಲ್ಲ, ಕನ್ನಡಿಗರ ನಿರಂತರ ಉತ್ಸಾಹ, ಬೆಂಬಲ ನಾವು ಮುಟ್ಟಿದ್ದೆಲ್ಲ ಸಾಧಾರಣ ಚಿನ್ನವಾಗುತ್ತಲೇ ಹೋಯಿತು. ಯಜಮಾನರಿಗೆ 'ಬೇಡರ ಕಣ್ಣಪ್ಪ'ದ ನಂತರ ಸೃಷ್ಟಿಗೊಂಡ ಉತ್ತೇಜಕ ವಾತಾವರಣ ಮುಂದುವರಿಯುತ್ತಲೇ ಹೋಯಿತು. ನಿರಂತರ ಬೇಡಿಕೆ, ವೈವಿಧ್ಯಮಯ ಪಾತ್ರಗಳು, ಗಾಯಕನಾಗಿಯೂ ಅಭೂತಪೂರ್ವ ಯಶಸ್ಸು. ಜೀವನವೇ ಒಂದು ರಂಗು ರಂಗಿನ ಚಿತ್ರವೆನಿಸಿತು. ಸಂಸಾರವೂ ಹಿಗ್ಗತೊಡಗಿತು. ಸೊಸೇರು ಬಂದರು, ಅಳಿಯಂದಿರು ಬಂದರು. ದೊಡ್ಡ ಸೊಸೆಗೆ ಎರಡು ಹೆಣ್ಣುಮಕ್ಕಳಾಗಿ, ಎರಡನೆಯವಳಿಗೂ ಒಂದು ಗಂಡಾಯಿತು. ಹಿರಿಯ ಮಗ ಅಭಿನಯಿಸಿದ ಮೂರು ಚಿತ್ರಗಳೂ ಒಂದಾದರ ಮೇಲೊಂದರಂತೆ 'ಹಿಟ್' ಆಗಿ 'ಹ್ಯಾಟ್ರಿಕ್' ಸಾಧಿಸಿದಾಗ ಯಾವ ತಂದೆ ತಾಯಿಗಾಗಲಿ ಅದೆಂಥ ಸಂತೋಷವಾಗಿರಬೇಡ!

ಬದುಕು ಎಷ್ಟೇ ವರ್ಣಮಯವಾಗಿದ್ದರೂ ಖೇದ, ದುಃಖ, ಬೇಗುದಿ, ಆತಂಕ ಇವುಗಳೆಲ್ಲ ಇದ್ದಾಗಲೇ ಅದು ಪರಿಪೂರ್ಣ ಅನ್ನಿಸಿಕೊಳ್ಳುತ್ತದೆ ಅಲ್ಲವೇ... 1972ರಲ್ಲಿ, ಒಮ್ಮೆ ಶೂಟಿಂಗ್‌ನಲ್ಲಿ ಯಜಮಾನರು ಕುದುರೆಯಿಂದ ಬಿದ್ದು ತೀವ್ರವಾಗಿ ಅಸ್ವಸ್ಥಗೊಂಡಿದ್ದಾಗ ನಾನು ಅನುಭವಿಸಿದ ಆತಂಕಮಯ ದಿನಗಳೆಷ್ಟು! ಡಾಕ್ಟರ್ ಹೇಳಿದರು... ಅವರಿಗೆ ಹೊತ್ತು ಹೊತ್ತಿಗೆ ಊಟ ತಿಂಡಿ ಕೊಟ್ಟು ಅವರು ಚೇತರಿಸಿಕೊಳ್ಳೋ ಹಾಗೆ ಮಾಡೋದೂ ಅಗತ್ಯ ಅಂತ. ನಾನು ಆಗಿನಿಂದ ಅವರ ಜತೆ ಎಡೆಬಿಡದೆ ಇರತೊಡಗಿದೆ. ಅದಕ್ಕೆ ಮೊದಲು ಚಿಕ್ಕ ಮಕ್ಕಳನ್ನು ಬಿಟ್ಟು ಹೋಗೋಕ್ಕೆ ಆಗ್ತಿರಲಿಲ್ಲ. ಆದರೆ ಅನಂತರ ಅವರ ಏಳಿಗೆ, ಆರೋಗ್ಯದತ್ತಲೇ ಸಂಪೂರ್ಣ ಗಮನ ನೀಡಲು ಪ್ರಾರಂಭಿಸಿದೆ. ಇಡೀ ಕರ್ನಾಟಕ ಜನತೆಯೇ ಅವರನ್ನು ಹಾಡಿ ಹೊಗಳುತ್ತಿರುವಾಗ ಅವರ ಪತ್ನಿಯಾಗಿ ಕೈಲಾದ ಸೇವೆಯನ್ನು ಸಲ್ಲಿಸೋದು ನನ್ನ ಕರ್ತವ್ಯ ತಾನೇ... ನನ್ನ ಯಜಮಾನರು ಹೇಳ್ತಾ ಇರ್ತಾರೆ... ನನ್ನ ಮಾವ ಅವರನ್ನು ಶಾಲೆಯಲ್ಲಿ ಓದಿಸದಿದ್ದರೂ ಚೆನ್ನಾಗಿ ಹೊಡೆದು, ಬೈದು ಜೀವನಾನುಭವವನ್ನು ಕಲಿಸಿದರಂತೆ. ಆದರೆ ನನಗೆ ಇವರಿಂದ ದೊರೆತಿರುವ ಶಿಕ್ಷಣ, ಮಾರ್ಗದರ್ಶನಕ್ಕೆ ನಾನು ಇವರಿಗೆ